# ದಿನಾಂಕ: 05/02/2019 ರಂದು ಮಾನ್ಯ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ:159, ಕೆಂಗೇರಿ ವಾರ್ಡ್‌ನಲ್ಲಿ ನಡೆದ ವಾರ್ಡ್‌ಸಮಿತಿ ಸಭೆಯ ನಡವಳಿ.

**ಸಭೆಗೆ ಹಾಜರಿದ್ದ ವಾರ್ಡ್‌ಸಮಿತಿ ಸದಸ್ಯರು**

| | |
|---|---|
| 1. ಶ್ರೀ.ಧರ್ಮವಿಜಯ– ಸದಸ್ಯರು | – |
| 2. ಶ್ರೀ. ವಿ ಕೇಶವಮೂರ್ತಿ– ಸದಸ್ಯರು | – |
| 3. ಶ್ರೀಮತಿ. ರತ್ನರಾಘವನ್– ಸದಸ್ಯರು | – |
| 4. ಶ್ರೀಮತಿ.ಧನಲಕ್ಷ್ಮಿ– ಸದಸ್ಯರು | – ಹಾಜರಿದ್ದರು |
| 5. ಶ್ರೀಮತಿ.ತ್ರಿವೇಣಿ– ಸದಸ್ಯರು | – ಹಾಜರಿದ್ದರು |
| 6. ಶ್ರೀ.ಎಂ.ಜೆ ನಾಗರಾಜ– ಸದಸ್ಯರು | – |
| 7. ಶ್ರೀ. ಶ್ರೀನಿವಾಸ್‌ಎಂ.ಟಿ – ಸದಸ್ಯರು | – |
| 8. ಶ್ರೀ.ಎಚ್ ರಮೇಶ್ – ಸದಸ್ಯರು | – ಹಾಜರಿದ್ದರು |
| 9. ಶ್ರೀ.ಕೆ.ಎಚ್ ರಾಮಚಂದ್ರಯ್ಯ – ಸದಸ್ಯರು | – ಹಾಜರಿದ್ದರು |
| 10. ಶ್ರೀ.ಮಹದೇವ ಆಚಾರ – ಸದಸ್ಯರು | – ಹಾಜರಿದ್ದರು |

**ಹಾಜರಿದ್ದ ಅಧಿಕಾರಿಗಳು**

1. ಶ್ರೀಮತಿ ಶಕುಂತಲಾ , ವೈಧ್ಯಕೀಯ ಇಲಾಖೆ, ಕೆಂಗೇರಿ
2. ಶ್ರೀ. ಟಿ. ಶಣ್ಮುಖಿ, ತೋಟಗಾರಿಕೆ ಇಲಾಖೆ, ಕೆಂಗೇರಿ
3. ಶ್ರೀ. ರವಿಚಂದ್ರಚಾರಿ ಟಿ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–159

ವಾರ್ಡ್ ಕಮಿಟಿ ಕಾರ್ಯದರ್ಶಿಯವರು ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

## 1) ಒಂಟಿ ಮನೆ ನಿರ್ಮಾಣದ ಫಲಾನುಭವಿಗಳ ಬಗ್ಗೆ

2018–19 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡ ಹಾಗೂ ಆರ್ಥಿಕವಾಗಿ ಹಿಂದುಳಿದವರು ಒಂಟಿ ಮನೆ ನಿರ್ಮಿಸಿಕೊಳ್ಳವ ಫಲಾನುಭವಿಗಳ ಪಟ್ಟಿಯನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಯಿತು.

ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದವರು ಒಟ್ಟು 30 ಫಲಾನಿಭವಿಗಳು ಅರ್ಜಿ ಸಲ್ಲಿಸಿರುತ್ತಾರೆ.

ಆರ್ಥಿಕವಾಗಿ ಹಿಂದುಳಿದವರು ಒಟ್ಟು 104 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, 2018–19ನೇ ಸಾಲಿಗೆ 15 ಜನ ಫಲಾನುಭವಿಗಳಿಗೆ ಒಂಟಿ ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಉಳಿದ 89 ಫಲಾಭವಿಗಳ ಪಟ್ಟಿಯನ್ನು ಹೆಚ್ಚುವರಿ ಎಂದು ತೀರ್ಮಾನಿಸಿ ಅನುಮೋದನೆಗೆ ಸಕ್ಷಮ ಅಧಿಕಾರಿರವರಿಗೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## 2) ತೋಟಗಾರಿಕೆ ಇಲಾಖೆ:–

ವಾರ್ಡ್–159ರ ಉದ್ಯಾನವನಗಳಲ್ಲಿ ನಡೆಸುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ನಿರ್ವಹಣೆಯ ವಿವರಗಳನ್ನು ಸಭೆಗೆ ತಿಳಿಸುವಂತೆ ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಇಲಾಖೆಯ ಸಿಬ್ಬಂದಿಯವರಿಗೆ ಮಾನ್ಯ ವಾರ್ಡ್ ಕಮಿಟಿ ಸದಸ್ಯರು ಕೋರಿರುತ್ತಾರೆ.

ಕ್ರಮ :– ಎಲ್ಲಾ ವಿವರಗಳನ್ನು ಕ್ರೋಢೀಕರಿಸಿ ಮುಂದಿನ ಸಭೆಯಲ್ಲಿ ವಿರಗಳನ್ನು ನೀಡುವುದಾಗಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿರವರು ತಿಳಿಸಿರುತ್ತಾರೆ.

## 3) ಬೀದಿ ದೀಪಗಳ ಬಗ್ಗೆ

ಕಸ್ತೂರಮ್ಮ ಬಡಾವಣೆಯಲ್ಲಿ 4 ಹೊಸ ವಿದ್ಯುತ್ ದೀಪಗಳನ್ನು ಅಳವಡಿಸುವ ಅವಶ್ಯಕತೆಯಿದೆ ಎಂದು ಮಾನ್ಯ ಸದಸ್ಯರು ಕೋರಿರುವ ಮೇರೆಗೆ, ವಿದ್ಯುತ್ ವಿಭಾಗದವರನ್ನು ಸಂಪರ್ಕಿಸಿ ಅವಶ್ಯಕತೆ ಇದ್ದಲ್ಲಿ ವಿದ್ಯುತ್ ದೀಪ ಅಳವಡಿಸಲು ಕ್ರಮ ವಹಿಸಲಾಗುವುದೆಂದು ಮಾನ್ಯ ಅಧ್ಯಕ್ಷರು ಸಭೆಗೆ ತಿಳಿಸಿದರು.

## 4) ಸಂಚಾರಿ ಪೊಲೀಸ್

ಹಳೇ ವಾಹನಗಳನ್ನು ವಾರ್ಡ್‌ನ ವಿವಿಧ ಪ್ರದೇಶಗಳ ರಸ್ತೆ ಬದಿಗಳಲ್ಲಿ ಶಾಶ್ವತವಾಗಿ ನಿಲುಗಡೆ ಮಾಡಿರುವುದಾಗಿ ಹಾಗೂ ಇವುಗಳನ್ನು ಶೀಘ್ರವಾಗಿ ತೆರವುಗೊಳಿಸುವಂತೆ ಹಾಜರಿದ್ದ ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ.

ರಸ್ತೆ ಸುರಕ್ಷತಾ ಸಪ್ತಾಹ ನಡೆಯುತ್ತಿರುವುದರಿಂದ ಸಭೆಗೆ ಹಾಜರಾಗಲು ಸಾಧ್ಯವಿರುವುದಿಲ್ಲವೆಂದು ಸಂಚಾರಿ ಆರಕ್ಷಕ ನಿರೀಕ್ಷಕರು ದೂರವಾಣಿ ಮುಖಾಂತರ ತಿಳಿಸಿದ್ದು, ಸದರಿ ವಿಷಯದ ಬಗ್ಗೆ ಸಂಚಾರಿ ಪೊಲೀಸ್ ಠಾಣೆಗೆ ತಿಳಿಸಿ ಕ್ರಮವಹಿಸಲು ಕೋರುವುದಾಗಿ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

## 5) ಕಾಮಗಾರಿ ಇಲಾಖೆ

ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಕಾರ್ಯದರ್ಶಿರವರು ಸಭೆಗೆ ವಿವರಿಸಿದರು, ಅಭಿವೃದ್ಧಿ ಕಾಮಗಾರಿಗಳ ವಿವರಗಳ್ನು ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಮಾನ್ಯ ಸದಸ್ಯರಿಗೆ ನೀಡುವಂತೆ ಮಾನ್ಯ ಅಧ್ಯಕ್ಷರು ಕಾರ್ಯದರ್ಶಿರವರಿಗೆ ಸೂಚಿಸಿದರು.

ವಾರ್ಡ್ ವ್ಯಾಪ್ತಿಯ ಬಹಳಷ್ಟು ಇಲಾಖೆಗಳ ಅಧಿಕಾರಿಗಳು/ ಸಿಬ್ಬಂದಿ ವರ್ಗದವರು ವಾರ್ಡ್ ಸಭೆಗೆ ಹಾಜರಾಗದಿರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಅಸಮಧಾನ ವ್ಯಕ್ತಪಡಿಸಿದ್ದರಿಂದ, ಮುಂದಿನ ಸಭೆಗೆ ಹಾಜರಾಗುವಂತೆ ತಿಳಿಸಲು ಕಾರ್ಯದರ್ಶಿರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ಅಂತಿಮವಾಗಿ ಮಾನ್ಯ ಅಧ್ಯಕ್ಷರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

| | |
|---|---|
| ಸಹಿ/– | ಸಹಿ/– |
| (ಎಂ.ಎಸ್. ಸುರೇಶ್) | (ವಿ.ವಿ.ಸತ್ಯನಾರಾಯಣ) |
| ಕಾರ್ಯದರ್ಶಿ | ಅಧ್ಯಕ್ಷರು, ವಾರ್ಡ್‌ಸಮಿತಿ |
| ಸಹಾಯಕ ಅಭಿಯಂತರರು | ಬಿ.ಬಿ.ಎಂ.ಪಿ., ಸದಸ್ಯರು |
| ಕೆಂಗೇರಿ ವಾರ್ಡ್ ಸಂಖ್ಯೆ:159 | ಕೆಂಗೇರಿ ವಾರ್ಡ್ ಸಂಖ್ಯೆ: 159 |